ಕಛೇರಿ : +91 80 2287 4039
+91 80 2235 4085
ಫ್ಯಾಕ್ಸ್ : +9180 2228 5591
ಇ-ಮೇಲ್ : com-hfws@karnataka.gov.in

# ಆಯುಕ್ತಾಲಯ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

No: SSU/COVID-19/Qua-Pat-Trans/04/2020-21 ದಿನಾಂಕ:15.05.2020

### ಸುತ್ತೋಲೆ

**ವಿಷಯ:** ವಿದೇಶದಿಂದ ಬಂದಿರುವ ಪ್ರಯಾಣಿಕರ ಅಂತರ್ ಜಿಲ್ಲಾ ಸಂಚಾರದ ಬಗ್ಗೆ

**ಉಲ್ಲೇಖ:** No: HFW 149 ACS 2020, ದಿನಾಂಕ: 13.05.2020

- - -

ಉಲ್ಲೇಖದಲ್ಲಿನ ಸೂಚನೆ ಕುರಿತಂತೆ ಅಂತರ್ ಜಿಲ್ಲಾ ಸಂಚಾರಕ್ಕೆ ಸಂಬಂಧಿಸಿದಂತೆ ಜಿಲ್ಲೆಗಳು ಈ ಕೆಳಗಿನ ಸೂಚನೆಗಳನ್ನು ಅನುಸರಿಸಬೇಕು.

1. ಬೆಂಗಳೂರು, ಮಂಗಳೂರು ಮತ್ತು ಕಾರವಾರದಲ್ಲಿ ಸಾಂಸ್ಥಿಕವಾಗಿ ಕ್ವಾರಂಟೈನ್ ವ್ಯವಸ್ಥೆಗೆ ಒಳಗಾದ ವಿದೇಶದಿಂದ ಆಗಮಿಸಿದ ಪ್ರಯಾಣಿಕರ ಸಂಚಾರಕ್ಕೆ ಸಂಬಂಧಿಸಿದಂತೆ ಸಮನ್ವಯ ಸಾಧಿಸಲು ಎಲ್ಲ ಜಿಲ್ಲಾಧಿಕಾರಿಗಳು ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಬೇಕು.
2. ಉಲ್ಲೇಖ(1)ರಂತೆ, ಕೋವಿಡ್ ಕೇರ್ ಸೆಂಟರ್ ನಲ್ಲಿ ಮೊದಲ ಅವಧಿಯನ್ನು ಪೂರ್ಣಗೊಳಿಸಿದ 4 ವರ್ಗಗಳ ಪ್ರಯಾಣಿಕರರು ತಮ್ಮ ತಮ್ಮ ಜಿಲ್ಲೆಗಳಿಗೆ ಪ್ರಯಾಣ ಬೆಳೆಸಲು ಅನುಮತಿ ನೀಡಬೇಕು. ನೆಗೆಟಿವ್ ಫಲಿತಾಂಶದ ಬಳಿಕ 14 ದಿನಗಳ ಹೋಮ್ ಕ್ವಾರಂಟೈನ್ ಗೆ ಒಳಪಡಿಸಬೇಕು.
3. ಪ್ರಯಾಣಿಕರನ್ನು ಮುಂದಿನ ಹಂತದಲ್ಲಿ ಹೋಮ್ ಕ್ವಾರಂಟೈನ್.ಗೆ ಒಳಪಡಿಸಲು ಪ್ರಯಾಣ ಮಾಡುವುದಕ್ಕೆ ಮುನ್ನ ಅವರ ಕೈಗೆ ಸಾಂಸ್ಥಿಕ ಕ್ವಾರಂಟೈನ್ ಕೇಂದ್ರದಲ್ಲಿ ಹಾಜರಿರುವ ಆರೋಗ್ಯಾಧಿಕಾರಿಗಳು ಹೋಮ್ ಕ್ವಾರಂಟೈನ್ ಮುದ್ರೆಯನ್ನು ಹಾಕಬೇಕು.
4. ಪ್ರಯಾಣಿಕರು ತಮ್ಮ ಪ್ರಯಾಣಿಕ್ಕೆ ಸ್ವತಃ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು ಮತ್ತು ಅದರ ವಿವರಗಳನ್ನು ಪ್ರತಿ ಸಾಂಸ್ಥಿಕ ಕ್ವಾರಂಟೈನ್ ಕೇಂದ್ರದಲ್ಲಿರುವ ನೋಡಲ್ ಅಧಿಕಾರಿಗಳಿಗೆ ಒದಗಿಸಬೇಕು. ಅಂತಹ ವ್ಯಕ್ತಿಗಳ ವಿವರಗಳನ್ನು **"ಯಾತ್ರಿ ಆ್ಯಪ್"** ನಲ್ಲಿ ದಾಖಲಿಸಬೇಕು.
5. ಕರ್ನಾಟಕ ರಾಜ್ಯ ಪೊಲೀಸರು ಪ್ರಯಾಣಿಕರಿಗೆ ಸಂಚಾರದ ಅನುಮತಿ ಪಾಸ್ ಗಳನ್ನು ನೀಡುತ್ತಾರೆ. ಹೀಗೆ ನೀಡಿದ ಎಲ್ಲ ಪಾಸ್ ಗಳನ್ನು ಜಿಲ್ಲಾ ಗಡಿಗಳ ಚೆಕ್ ಪೋಸ್ಟ್‌ಗಳನ್ನು ದೃಢೀಕರಿಸಿ ಸುಲಭ ಸಂಚಾರಕ್ಕೆ ಅನುವು ಮಾಡಿಕೊಡಬೇಕು.

6. ಹೀಗೆ ನೀಡಿದ ಅನುಮತಿಗೆ ಸಂಬಂಧಿಸಿದ ಮಾಹಿತಿಯನ್ನು ಸಾಂಸ್ಥಿಕ ಕ್ವಾರಂಟೈನ್ ಕೇಂದ್ರದ ನೋಡಲ್ ಅಧಿಕಾರಿಯು "ಯಾತ್ರಿ ಆ್ಯಪ್"ನಲ್ಲಿ ಅಪ್ಡೇಟ್ ಮಾಡಬೇಕು.

7. ಜಿಲ್ಲೆಗಳ ನೋಡಲ್ ಅಧಿಕಾರಿಗಳು ಬೆಂಗಳೂರು ನಗರದ ಜಿಲ್ಲಾಧಿಕಾರಿ ನೇಮಕ ಮಾಡಿದ ಸಾಂಸ್ಥಿಕ ಕ್ವಾರಂಟೈನ್ ನೋಡಲ್ ಅಧಿಕಾರಿಗಳ ಜೊತೆಗೆ ಸಮನ್ವಯ ಸಾಧಿಸಬೇಕು ಮತ್ತು ಪ್ರಯಾಣಿಕರು ತಮ್ಮ ತಮ್ಮ ಜಿಲ್ಲೆಗಳಿಗೆ ತಲುಪಿರುವುದನ್ನು ಖಾತರಿಪಡಿಸಬೇಕು.

8. ಹೀಗೆ ಜಿಲ್ಲೆಗಳಿಗೆ ತಲುಪಿದ ಪ್ರಯಾಣಿಕರ ಮನೆಯ ಮೇಲೆ ಹೋಮ್ ಕ್ವಾರಂಟೈನ್ ಪೋಸ್ಟರ್ ಅಂಟಿಸಲು ಜಿಲ್ಲೆಗಳು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಎಸ್‌ಓಪಿಯಂತೆ 14 ದಿನಗಳ ಹೋಮ್ ಕ್ವಾರಂಟೈನ್ ಮತ್ತು ಅದಾದ ಬಳಿಕ 14 ದಿನಗಳ ವರದಿ ನೀಡಿಕೆ ಅವಧಿಯನ್ನು ಪೂರ್ಣಗೊಳಿಸುವ ವಿಚಾರದಲ್ಲಿ ಉಸ್ತುವಾರಿ ವಹಿಸಬೇಕು.

Pankaj 17/5/20

(ಪಂಕಜ್ ಕುಮಾರ್ ಪಾಂಡೆ)
ಆಯುಕ್ತರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

**ಇವರಿಗೆ:**

1. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.

**ಪ್ರತಿಯನ್ನು ಮಾಹಿತಿಗಾಗಿ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
2. ವಿಶೇಷ ಕರ್ತವ್ಯಾಧಿಕಾರಿ, ಎಸ್.ಎಸ್.ಯು, ಕೋವಿಡ್-19
3. ಅಭಿಯಾನ ನಿರ್ದೇಶಕರು, ಎನ್.ಎಚ್.ಎಂ, ಬೆಂಗಳೂರು
4. ನಿರ್ದೇಶಕರು, ಎಚ್&ಎಫ್.ಡಬ್ಲ್ಯು, ಬೆಂಗಳೂರು
5. ಯೋಜನಾ ನಿರ್ದೇಶಕರು, ಆರ್.ಸಿ.ಎಸ್. ಬೆಂಗಳೂರು
6. ಯೋಜನಾ ನಿರ್ದೇಶಕರು, ಐಡಿಎಸ್.ಪಿ, ಬೆಂಗಳೂರು.
7. ಜಂಟಿ ನಿರ್ದೇಶಕರು, ಸಿಎಂಡಿ, ಬೆಂಗಳೂರು.